## 13. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಗಚಿ, ಹೊಸನಗರ ತಾ॥

### ➢ ಶಾಲೆಯ ಹಿನ್ನಲೆ:

ಹೊಸನಗರ ತಾಲ್ಲೂಕು ಕೇಂದ್ರದಿಂದ ಸುಮಾರು 40 ಕೀ,ಮಿ ದೂರದಲ್ಲಿರುವ, ಹೆದ್ದಾರಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಒಂದು ಸಣ್ಣ ಕುಗ್ರಾಮ ಕಗಚಿ. ಸಾರಿಗೆ ಸೌಲಭ್ಯವಿರುವ ಮುಖ್ಯ ರಸ್ತೆಯನ್ನು ತಲುಪಲು 7 ಕೀ,ಮಿ ನಡೆಯಬೇಕಾಗುತ್ತದೆ. ಇಂತಹ ಸ್ಥಳದಲ್ಲಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರವು 1997–98 ರಲ್ಲಿ ಕಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದು, 20 ವರ್ಷಗಳನ್ನು ಪೂರ್ಣಗೊಳಿಸಿದೆ. ಪ್ರಸ್ತುತ ಈ ಶಾಲೆಯಲ್ಲಿ 1 ರಿಂದ 5ನೇ ತರಗತಿಯ ವರೆಗೆ ಒಟ್ಟು 13 ಮಕ್ಕಳಿದ್ದು, ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದೇವೆ.

### ➢ ಶಾಲೆಯಲ್ಲಿ ಕೈಗೊಂಡಿರುವ ನಾವೀನ್ಯಯುತ ಚಟುವಟಿಕೆಗಳು:

- ಸುಂದರ ಶಾಲಾ ಕೈತೋಟ ಮತ್ತು ಉದ್ಯಾನವನ.
- ಶಾಲಾ ಮಕ್ಕಳ ಬಾಲವನ.
- ವಿಶಿಷ್ಟವಾದ ಗೋಡೆ ಬರಹಗಳು.
- ವಿದ್ಯಾರ್ಥಿ ಬ್ಯಾಂಕ್.
- ಸಹಪಠ್ಯ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಉತ್ತೇಜಿಸುವುದು.
- ಶಾಲಾ ಅಂಗಡಿ.
- ಅತ್ಯುತ್ತಮ ಕಲಿಕಾ ಸಾಮಗ್ರಿಗಳ ತಯಾರಿಕೆ ಮತ್ತು ಬಳಕೆ.
- ದೂರದರ್ಶನದ ಮೂಲಕ ಕಲಿಕೆ.

### ➢ ಈ ಸಾಧನೆಯ ಪ್ರಕ್ರಿಯೆಗಳು:

- **ಸುಂದರ ಶಾಲಾ ಕೈತೋಟ:** ನಮ್ಮ ಶಾಲೆಯು ಸುಮಾರು 2.5 ಎಕರೆ ಜಮೀನನ್ನು ಹೊಂದಿದ್ದು ಶಾಲೆಗೆ ಅಗತ್ಯ ರಕ್ಷಣೆಯ ಅವಶ್ಯಕತೆ ಇತ್ತು. ಈ ಕೊರತೆಯನ್ನು ನೀಗಿಸುವ ಸಲುವಾಗಿ ಎಸ್‌ಡಿಎಮ್‌ಸಿಯವರೊಂದಿಗೆ ಚರ್ಚಿಸಿ ದಾನಿಗಳಿಂದ ಸುಮಾರು 1 ಲಕ್ಷದಷ್ಟು ಹಣವನ್ನು ಸಂಗ್ರಹಿಸಲಾಯಿತು. ಈ ಹಣದಿಂದ ಶಾಲೆಯ ಜಾಗದ ಸುತ್ತಲೂ ತಂತಿ ಬೇಲಿಯನ್ನು ನಿರ್ಮಿಸಲಾಯಿತು. ನಂತರ ಶಾಲೆಗೆ ಅಗತ್ಯ ನೀರಿನ ಸೌಲಭ್ಯ ಪಡೆಯಲು ಗ್ರಾ, ಪಂಗೆ ಅರ್ಜಿಯನ್ನು ನೀಡಿ, ಬಾವಿಯ ವ್ಯವಸ್ಥೆ ಕಲ್ಪಿಸಲಾಯಿತು. ಈ ಎರಡೂ ಸೌಲಭ್ಯಗಳು ದೊರೆತ ನಂತರ ಶಾಲಾ ಕೈತೋಟ ನಿರ್ಮಾಣಕ್ಕೆ ಕೈ ಹಾಕಲಾಯಿತು. ಇಂದು ಊರಿನವರ ಹಾಗೂ ಎಸ್‌ಡಿಎಮ್‌ಸಿಯವರ ಸಹಕಾರದಿಂದ ಸುಂದರ ಉದ್ಯಾನವನ ನಿರ್ಮಾಣವಾಗಿ ನಿಂತಿದೆ.

- **ಶಾಲಾ ಮಕ್ಕಳ ಬಾಲವನ:** ಮಕ್ಕಳು ಆಟವಾಡಲು ಜೋಕಾಲಿ, ಜಾರುಬಂಡಿ ಮುಂತಾದ ಆಟದ ಸಾಮಾಗ್ರಿಗಳನ್ನು ಶಾಲೆಯ ಆವರಣದಲ್ಲಿ ಅಳವಡಿಸಲಾಗಿದೆ. ಬಿಡುವಿನ ವೇಳೆಯಲ್ಲಿ ಅತ್ಯಂತ ಸಂತಸದಿಂದ ಮಕ್ಕಳು ಆಟವಾಡುತ್ತಾರೆ.
- **ಗೋಡೆ ಬರಹಗಳು:** ಶಾಲಾ ಗೋಡೆಗಳನ್ನು ಕಲಿಕಾ ಚಟುವಟಿಕೆಗೆ ಬಳಸುವ ಉದ್ದೇಶದಿಂದ ಅವುಗಳ ಮೇಲೆ ಆಕರ್ಷಕ ಗೋಡೆ ಬರಹಗಳನ್ನು ಬರೆಸಲಾಗಿದೆ. ಇದರಲ್ಲಿ ಗಣ್ಯರ ನುಡಿಮುತ್ತುಗಳು, ಭಾರತದ ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು, ನದಿಗಳು ಹೀಗೆ ಉಪಯುಕ್ತ ಮಾಹಿತಿಗಳನ್ನು ಬರೆಸಲಾಗಿದೆ.
- **ವಿದ್ಯಾರ್ಥಿ ಬ್ಯಾಂಕ್:** ಮಕ್ಕಳಿಗೆ ಬಾಲ್ಯದಿಂದಲೇ ಉಳಿತಾಯದ ಮಹತ್ವ ಹಾಗೂ ವ್ಯವಹಾರಿಕ ಜ್ಞಾನವನ್ನು ಬೆಳೆಸಲು ಮಕ್ಕಳ ಬ್ಯಾಂಕ್ ತೆರೆಯಲಾಗಿದೆ. ಪ್ರತಿ ಮಕ್ಕಳು ಉಳಿತಾಯ ಖಾತೆಯನ್ನು ಹೊಂದಿದ್ದು, ಪಾಸ್ ಪುಸ್ತಕವನ್ನು ನೀಡಲಾಗಿದೆ. ಮಕ್ಕಳು ತಮ್ಮ ಉಳಿತಾಯದ ಹಣವನ್ನು ತಮ್ಮ ಖಾತೆಗೆ ಜಮಾ ಮಾಡುತ್ತಾರೆ. ಪ್ರವಾಸ, ಬರವಣಿಗೆ ಸಾಮಾಗ್ರಿಗಳ ಖರೀದಿ ಇತ್ಯಾದಿಗಳಿಗಾಗಿ ಹಣವನ್ನು ಮರಳಿ ಪಡೆಯುತ್ತಾರೆ.
- **ಸಹಪಠ್ಯ ಚಟುವಟಿಕೆಗಳು:** ನಮ್ಮ ಶಾಲೆಯಲ್ಲಿ ನಿರಂತರವಾಗಿ ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆಶುಭಾಷಣ, ರಸಪ್ರಶ್ನೆ, ನಾಟಕ, ಆಟೋಟಗಳು ಮುಂತಾದ ಚಟುವಟಿಗಳನ್ನು ಆಯೋಜಿಸಲಾಗುತ್ತಿದೆ. ಅಲ್ಲದೆ ಪ್ರತೀ 2 ವರ್ಷಗಳಿಗೊಮ್ಮೆ ಶಾಲಾ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡುಲಾಗುತ್ತಿದೆ.
- **ಶಾಲಾ ಅಂಗಡಿ:** ಮಕ್ಕಳಿಗೆ ಬರವಣಿಗೆಗೆ ಅಗತ್ಯವಾದ ಪರಿಕರಗಳು ಈ ಗ್ರಾಮದಲ್ಲಿ ದೊರೆಯದ ಕಾರಣ ಮಕ್ಕಳಿಗೆ ತುಂಬಾ ಸಮಸ್ಯೆಯಾಗಿತ್ತು. ಇದನ್ನು ಮನಗಂಡು ಶಾಲೆಯಲ್ಲಿಯೇ ಈ ವಸ್ತುಗಳು ದೊರೆಯುವಂತೆ ಮಾಡಲು ಶಾಲಾ ಅಂಗಡಿಯನ್ನು ತೆರೆಯಲು ನಿರ್ಧರಿಸಿದೆವು. ಶಿಕ್ಷಕರೇ ಪ್ರಾರಂಭದಲ್ಲಿ ಹಣ ನೀಡಿ ಸಾಮಾಗ್ರಿಗಳನ್ನು ತರಲಾಯಿತು. ಈ ಅಂಗಡಿಯನ್ನು ಮಕ್ಕಳೇ ನಿರ್ವಹಣೆ ಮಾಡುತ್ತಿದ್ದು, ಮಕ್ಕಳಿಗೆ ಕಡಿಮೆ ಬೆಲೆಯಲ್ಲಿ ಸಕಾಲದಲ್ಲಿ ಬರವಣಿಗೆಗೆ ಸಂಬಂಧಿಸಿದ ವಸ್ತುಗಳು ದೊರೆಯುವುದರ ಜೊತೆಗೆ ವ್ಯವಹಾರಿಕ ಜ್ಞಾನವು ದೊರೆಯುತ್ತಿದೆ.
- **ಅಗತ್ಯ ಕಲಿಕಾ ಸಾಮಾಗ್ರಿಗಳ ತಯಾರಿಕೆ:** ದಿನನಿತ್ಯದ ಕಲಿಕಾ ಪ್ರಕ್ರಿಯೆ, ಕಲಿಕೆಯನ್ನು ಅನುಕೂಲಿಸಲು ಕಲಿಕಾ ಸಾಮಾಗ್ರಿಗಳು ಅತ್ಯವಶ್ಯಕ. ಈ ಕಾರಣದಿಂದ ಕಡಿಮೆ ಬೆಲೆಯಲ್ಲಿ, ದೀರ್ಘಕಾಲ ಬಾಳಿಕೆ ಬರುವ ಹಾಗೇ ಕಲಿಕೋಪಕರಣಗಳನ್ನು ತಯಾರಿಸಲು ನಿರ್ಧರಿಸಿದೆವು. ಪ್ರಮುಖವಾಗಿ ನಲಿಕಲಿಗೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ತರಗತಿವಾರು, ವಿಷಯವಾರು, ಮೈಲಿಗಲ್ಲುವಾರು ಕಲಿಕೋಪಕರಣಗಳನ್ನು ತಯಾರಿಸಿ ಜೋಡಿಸಲಾಗಿದೆ. ಇದರಿಂದ ಕಲಿಕೆ ಉತ್ತಮವಾಗಿ ನಡೆಯುತ್ತಿದ್ದು, ಮಕ್ಕಳಿಗೆ ಸಂತಸ ದಾಯಕ ಕಲಿಕೆ ಉಂಟಾಗುತ್ತಿದೆ.

## ➢ ಸವಾಲುಗಳು ಮತ್ತು ಪರಿಹಾರಗಳು:

- ಮೊದಲನೇಯದಾಗಿ ಶಾಲಾ ಆವರಣ ಹಾಗೂ ಪರಿಕರಗಳ ರಕ್ಷಣೆ ನಮಗೆ ಸವಾಲಾಗಿತ್ತು. ಒತ್ತುವರಿಯ ಸಮಸ್ಯೆಯನ್ನು ಅತ್ಯಂತ ಸೂಕ್ಷ್ಮವಾಗಿ ಪರಿಹರಿಸಿ, ದಾನಿಗಳ ಸಹಕಾರದಿಂದ ಆವರಣಕ್ಕೆ ತಂತಿ ಬೇಲಿ ನಿರ್ಮಿಸುವ ಮೂಲಕ ಪರಿಹಾರವನ್ನು ಕಂಡುಕೊಳ್ಳಲಾಯಿತು.

- ಶಾಲಾ ವನ ನಿರ್ಮಾಣ ಮಾಡಲು ಹೊರಟಾಗ ನಮಗೆ ಎದುರಾದ ಮೊದಲ ಸವಾಲು ನೀರಿನ ಪೂರೈಕೆ. ಇದಕ್ಕಾಗಿ ಗ್ರಾ.ಪಂಗೆ ಮನವಿ ಸಲ್ಲಿಸಿ ಬಾವಿಯ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾದೆವು. ನಂತರ ಕೈತೋಟ ನಿರ್ಮಾಣ ಮಾಡಲು ಅಗತ್ಯ ಗಿಡಗಳನ್ನು ಖರೀದಿಸಿ ನೆಡಲಾಯಿತು. ಇವುಗಳಿಗೆ ವಿಶೇಷವಾಗಿ ಹನಿ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವುದರ ಮೂಲಕ ನೀರಿನ ಉಳಿತಾಯದ ಬಗ್ಗೆ ಅರಿವು ಮೂಡಿಸಲಾಗಿದೆ.
- ಸುಂದರ, ಸ್ವಚ್ಛ ಹಾಗೂ ವ್ಯವಸ್ಥಿತ ಶಾಲಾ ಪರಿಸರವನ್ನು ನಿರ್ಮಾಣ ಮಾಡುವಲ್ಲಿ ಎದುರಾದ ಸವಾಲುಗಳನ್ನು ಸತತ ಪ್ರಯತ್ನದ ಮೂಲಕ ಸೌಲಭ್ಯಗಳನ್ನು ಪಡೆದು ಇಂದು ಶಾಲೆಗೆ ಬಾವಿ, ಶೌಚಾಲಯ, ಬಾಲವನ, ರ‍್ಯಾಕ್, ಡೆಸ್ಕ್‌ಗಳು, ಟಿ.ವಿ, ಡಿ.ವಿ.ಡಿ, ಮೈಕ್ ,ಅಕ್ಷರ ದಾಸೋಹದ ಪರಿಕರಗಳ ವ್ಯವಸ್ಥೆ ಮಾಡಲಾಗಿದೆ.
- ಮುಖ್ಯವಾಗಿ ಅತೀ ಹಿಂದುಳಿದ ದಲಿತ ಕುಟುಂಬಗಳೇ ಹೆಚ್ಚಾಗಿರುವ ಈ ಊರಿನಲ್ಲಿ ಪೋಷಕರನ್ನು ಶಾಲೆಯ ಕಡೆ ಮುಖ ಮಾಡುವಂತೆ ಮಾಡುವುದೇ ಒಂದು ದೊಡ್ಡ ಸವಾಲಾಗಿತ್ತು. ಹಂತ ಹಂತವಾಗಿ ಅವರಿಗೆ ತಿಳುವಳಿಕೆ ನೀಡುವುದರ ಮೂಲಕ ಇಂದು ಎಲ್ಲರೂ ಶಾಲೆಯ ಕಡೆ ಬರುತ್ತಿರುವುದು, ಮಕ್ಕಳ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ನಮ್ಮ ದೊಡ್ಡ ಗೆಲುವಾಗಿದೆ.

## ➢ ವೈಯುಕ್ತಿಕ ಅನಿಸಿಕೆ:

"ನಮ್ಮ ಶಾಲೆ ನಮ್ಮೂರ ಹೆಮ್ಮೆಯ ಶಾಲೆ" ಎಂಬ ಶಾಲೆ ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರಾರಂಭವಾದ ಈ ನಮ್ಮ ಪ್ರಯತ್ನದಲ್ಲಿ ನಾವು ಸಾಧಿಸಿರುವುದು ಅತ್ಯಲ್ಪ, ಆದರೆ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ಮೂಡಿದೆ. ನಮ್ಮ ಕನಸಿನ ಶಾಲೆಗೆ ಮಾಡಬೇಕಾದ ಕಾರ್ಯಗಳು ತುಂಬಾ ಇವೆ. ಪ್ರಮುಖವಾಗಿ ಇರುವ ಶಾಲಾ ಕೊಠಡಿಗಳಲ್ಲಿ ಒಂದು ಕೊಠಡಿಯು ತುಂಬಾ ಶಿಥಿಲಗೊಂಡಿದ್ದು, ಹೊಸ ಕಟ್ಟಡದ ಅಗತ್ಯವಿದೆ. ಕಂಪ್ಯೂಟರ್, ಶಾಲಾ ಕಾಂಪೌಂಡ್ ಇನ್ನಿತರೆ ಸೌಲಭ್ಯಗಳ ಅಗತ್ಯವಿದೆ. ಇದಕ್ಕಾಗಿ ಎಸ್‌ಡಿಪಿ ರಚಿಸಿ ಕ್ರಿಯಾ ಯೋಜನೆ ರೂಪಿಸಲಾಗಿದೆ.

ಈ ನಮ್ಮ ಶಾಲೆಯ ಅಭಿವೃದ್ಧಿಯಲ್ಲಿ ನಮಗೆ ಸಹಾಯ ಹಾಗೂ ಮಾರ್ಗದರ್ಶನ ನೀಡಿದ ದಾನಿಗಳಿಗೆ, ಊರಿನವರಿಗೆ, ಪೋಷಕರಿಗೆ ಹಾಗು ಇಲಾಖೆಯ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ.